ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1730**
ಸದಸ್ಯರ ಹೆಸರು	:	ಶ್ರೀ ಕೆ. ಹರೀಶ್ ಕುಮಾರ್ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	14-03-2022
ಉತ್ತರಿಸುವ ಸಚಿವರು	:	ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

***

	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ವಿದ್ಯುತ್ ಕಡಿತಗೊಳಿಸುವುದರಿಂದ ಜನ ಸಾಮಾನ್ಯರು ಸಮಸ್ಯೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿರುವ 110/33/11 ಕೆವಿ ಗುರುವಾಯನಕೆರೆ ವಿದ್ಯುತ್ ಉಪಕೇಂದ್ರ, 33/11 ಕೆವಿ ಬೆಳ್ತಂಗಡಿ, ಕಕ್ಕಿಂಜೆ, ಧರ್ಮಸ್ಥಳ, ವೇಣೂರು ಉಪಕೇಂದ್ರಗಳ ವ್ಯಾಪ್ತಿಯಲ್ಲಿ ಬೇಸಿಗೆ ಕಾಲದ ಅವಧಿಯಲ್ಲಿ ಹೆಚ್ಚಿನ ಬೇಡಿಕೆಯಿಂದ ದಿನದ ಕೆಲವೊಂದು ಅವಧಿಯಲ್ಲಿ ಅನಿವಾರ್ಯ ಸಂದರ್ಭಗಳಲ್ಲಿ ಹೊರೆಯನ್ನು ನಿಯಂತ್ರಿಸುವ ದೃಷ್ಟಿಯಿಂದ ಗ್ರಾಮಾಂತರ ಫೀಡರ್‌ಗಳಲ್ಲಿ ದಿನದಲ್ಲಿ ಸ್ವಲ್ಪ ಮಟ್ಟಿನ ಅವಧಿಗೆ ವಿದ್ಯುತ್ ಕಡಿತ ಮಾಡಲಾಗುತ್ತಿದೆ.
ಆ)	ರೈತರಿಗೆ ತ್ರಿ-ಫೇಸ್ ವಿದ್ಯುತ್ ನೀಡದಿರುವುದರಿಂದ ನೀರಿದ್ದರೂ ಕೃಷಿಗೆ ಬಳಸಲಾಗದ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕೊಯ್ಯೂರು, ಬಂದಾರು, ನ್ಯಾಯತರ್ಪು, ಬೆಳಾಲು, ಲಾಯಿಲ, ನಡ, ನಾವೂರು, ಇಂದಬೆಟ್ಟು, ಮಿತ್ತಬಾಗಿಲು, ಮಲವಂತಿಗೆ, ನಿಡ್ಲೆ, ಕಳಂಜ, ರೇಖ್ಯಾ, ಶಿಶಿಲ, ಶಿಬಾಜೆ, ಕೊಕ್ಕಡ, ಹತ್ಯಡ್ಕ, ಪುದುವೆಟ್ಟು ಪ್ರದೇಶಗಳಲ್ಲಿ ದಿನದಲ್ಲಿ 12 ರಿಂದ 15 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ನೀಡಲಾಗುತ್ತಿದ್ದು ಉಳಿದ ಅವಧಿಗೆ ಸಿಂಗಲ್ ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.. ಬೆಳ್ತಂಗಡಿ ಕಸಬಾ, ಧರ್ಮಸ್ಥಳ, ವೇಣೂರು, ಕರಿಮಣೇಲು, ನಿಟ್ಟಾಡೆ, ಕುಕ್ಕೇಡಿ, ಆರಂಬೋಡಿ, ಹೊಸಂಗಡಿ, ಬಜಿರೆ, ಚಾರ್ಮಾಡಿ, ನೆರಿಯ, ತೋಟತ್ತಾಡಿ, ದಿಡುಪೆ, ಸವಣಾಲು, ಇಳಂತಿಲ, ಮೊಗ್ರು, ಕಣಿಯೂರು, ಉರುವಾಲು, ಬಾರ್ಯ ಮೇಲಂತಬೆಟ್ಟು, ಓಡಿಲ್ನಾಳ, ಪುತ್ತಿಲ, ತೆಕ್ಕಾರು, ತಣ್ಣೀರುಪಂಥ, ಕರಾಯ, ಕುವೆಟ್ಟು ಮಾಲಡಿ, ಸೋಣಂದೂರು, ಕುದ್ಯಾಡಿ, ಸುಲ್ಕೇರಿ, ಬಡಗಕಾರಂದೂರು, ಪಿಲ್ಯ, ನಾವಾರ ಇತ್ಯಾದಿ ಪ್ರದೇಶಗಳಲ್ಲಿ ಅಲ್ಪ ಪ್ರಮಾಣದ ವಿದ್ಯುತ್ ಕಡಿತ ಹೊರತುಪಡಿಸಿ ದಿನದ ಉಳಿದ ಅವಧಿಯಲ್ಲಿ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಇ)	ಗುಣಮಟ್ಟದ ವಿದ್ಯುತ್ ಪೂರೈಕೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? (ವಿವರ ನೀಡುವುದು)	ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಪ್ರದೇಶಗಳಲ್ಲಿ ಸಮರ್ಪಕ ವಿದ್ಯುತ್ ಸರಬರಾಜಿಗಾಗಿ ಕವಿಪ್ರನಿನಿಯ ವತಿಯಿಂದ ಕೈಗೊಳ್ಳಲಾಗಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ ಹಾಗೂ ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವತಿಯಿಂದ ಉಜಿರ ಮತ್ತು ಪಿಲಿಕಳ ಸ್ಥಳಗಳಲ್ಲಿ 33 ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲು ಆರ್.ಡಿ.ಎಸ್.ಎಸ್. ಯೋಜನೆಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಮುಂದುವರೆದು, ಆದ್ಯತೆಯ ಮೇರೆಗೆ ಹೊಸ ಉಪಕೇಂದ್ರ, ಹಾಲಿ ಇರುವ ಉಪಕೇಂದ್ರಗಳ ಉನ್ನತೀಕರಣ, ವಾಹಕ ಬದಲಾವಣೆ ಹಾಗೂ ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಎನರ್ಜಿ 71 ಇಬಿಎಸ್ 2022.

(ವಿ.ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಹರೀಶ್ ಕುಮಾರ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1730ಕ್ಕೆ ಅನುಬಂಧ

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕವಿಪ್ರನಿನಿ ವತಿಯಿಂದ ಕೈಗೊಂಡ ಕಾಮಗಾರಿಗಳ ವಿವರಗಳು ಕೆಳಕಂಡಂತಿದೆ:

ಕ್ರ. ಸಂ	ಕಾಮಗಾರಿಗಳ ವಿವರ	ತೆಗೆದುಕೊಂಡ ಕ್ರಮ
1	ಬೆಳ್ತಂಗಡಿ ತಾಲ್ಲೂಕಿನ ಕರಾಯ 110 ಕೆವಿ ವಿದ್ಯುತ್ ಉಪಕೇಂದ್ರದಲ್ಲಿ ಹೆಚ್ಚುವರಿ 1 x 20 ಎಂ.ವಿ.ಎ., 110/33 ಕೆವಿ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ.	ಕಾಮಗಾರಿಯು ಪ್ರಗತಿಯಲ್ಲಿದ್ದು, ಮಾರ್ಚ್ 2022 ರಲ್ಲಿ ಮುಕ್ತಾಯಗೊಳ್ಳಬಹುದಾಗಿದೆ.
2	ಬೆಳ್ತಂಗಡಿ ತಾಲ್ಲೂಕಿನ ಕರಾಯ 110 ಕೆವಿ ವಿದ್ಯುತ್ ಉಪಕೇಂದ್ರದಲ್ಲಿ ಹೆಚ್ಚುವರಿ 1 x 10 ಎಂ.ವಿ.ಎ., 110/11ಕೆವಿ ಪರಿವರ್ತಕವನ್ನು ಅಳವಡಿಸುವ ಕಾಮಗಾರಿ.	ಕಾಮಗಾರಿಯು ಪ್ರಗತಿಯಲ್ಲಿದೆ
3	ಬೆಳ್ತಂಗಡಿ ತಾಲ್ಲೂಕಿನ ಗುರುವಾಯನಕೆರೆ 110 ಕೆವಿ ವಿದ್ಯುತ್ ಉಪಕೇಂದ್ರದಲ್ಲಿ ಹೆಚ್ಚುವರಿ 1 x 20 ಎಂ.ವಿ.ಎ., 110/33 ಕೆವಿ ಹಾಗೂ 1 x 10 ಎಂ.ವಿ.ಎ., ಯಿಂದ 1 x 20 ಎಂ.ವಿ.ಎ., 110/11 ಕೆವಿ ಪರಿವರ್ತಕಗಳನ್ನು ಬದಲಾಯಿಸುವ ಕಾಮಗಾರಿ.	ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.